**ದಿ: 30-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**( ಮದ್ಯಂತರ ಅರ್ಜಿ 13 ಮತ್ತು 14 ನ್ನು ಅಂಗೀಕರಿಸಿ ಮುಂದುವರಿದ ಮುಖ್ಯ ವಿಚಾರಣೆಗೆ ಅನುಮತಿಸಲಾಯಿತು. )**

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ ಎಸ್.ಎಸ್.ಪಿ. ವಕೀಲರಿಂದ :**

ಈ ಕೆಳಗಿನ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

1. ಪುರಸಭೆ ಕಾರ್ಯಾಲಯ ದೇವದುರ್ಗ ರವರು ನೀಡಿರುವ ವರ್ಗಾವಣೆಯ ಆದೇಶದ ದೃಢೀಕೃತ ನಕಲನ್ನು ನಿ ಡಿ 28 ಎಂದು ಗುರುತಿಸಲಾಯಿತು.

**ಪಾಟೀಸವಾಲು: ಶ್ರೀ ಎಮ್ ಡಿ ಕೆ ವಕೀಲರಿಂದ :-**

1. ನನಗೆ ಇಂಗ್ಲೀಷ್ ಭಾಷೆ ಮತ್ತು ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯಗಳನ್ನು ಬರೆದಿದ್ದಾರೆಂದು ನನಗೆ ಗೊತ್ತಿದೆ. 1ನೇ ಪ್ರತಿವಾದಿ ನನಗೆ ಮಾವನಾಗಬೇಕು. 2ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗನಾಗಿರುತ್ತಾನೆ ನನಗೆ ಅಳಿಯನಾಗಬೇಕು. ನಾನು ಮತ್ತು ನನ್ನ ಗಂಡ ಟಿನ್ ಶೆಡ್ ನಲ್ಲಿ ಸುಮಾರು 30-40 ವರ್ಷಗಳಿಂದ ವಾಸ ಮಾಡುತ್ತಿದ್ದೇವೆ. ನಾವು ಈ ರೀತಿ 30-40 ವರ್ಷಗಳಿಂದ ವಾಸ ಮಾಡುತ್ತಿದ್ದೀವಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಕೊಟ್ಟಿದ್ದೇನೆ. ಆ ಜಾಗದ ಪುರಸಭೆ ನಂಬರ್ ಏನಿದೆ ಎಂದರೆ ನನಗೆ ಗೊತ್ತಿಲ್ಲ. ಆ ಜಾಗದ ಟಿ ಎಮ್ ಸಿ ನಂಬರ್ 2-1-62/6 ಅಂತಾ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಟಿನ್ ಶೆಡ್ ನ ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಟಿನ್ ಶೆಡ್ ಜಾಗವು ಮೊದಲು ನನ್ನ ಅತ್ತೆ ಮಾವ ಇವರ ಹೆಸರಿನಲ್ಲಿದ್ದು ನಂತರ ನನ್ನ ಗಂಡ ನನ್ನ ಮರಿಯಪ್ಪನ ಹೆಸರಲೇ ಆಗಿರುತ್ತದೆ ನಂತರ ನನ್ನ ಹೆಸರಿಗೆ ಆಗಿರುತ್ತದೆ. ನನ್ನ ಅತ್ತೆ ಮಾವ ಮತ್ತು ನನ್ನ ಗಂಡನ ಹೆಸರಿನಲ್ಲಿರುವಂತಹ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಿಮ್ಮ ಅತ್ತೆ ಮಾವನ ಹೆಸರಿನಲ್ಲಿರುವ ಯಾವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿ ಡಿ 28 ರಲ್ಲಿ ಇರುವ ಪುರಸಭೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಮುಟೇಸನ್ ಮಾಡಲು ನಾನೇ ಅರ್ಜಿಯನ್ನು ಕೊಟ್ಟಿರುತ್ತೇನೆ. ಯಾವ ಯಾವ ದಾಖಲೆಗಳನ್ನು ಮುಟೇಶನ್ ಮಾಡಲು ಕೊಟ್ಟಿದ್ದೇನೆಂದು ನನಗೆ ಗೊತ್ತಿಲ್ಲ. ಮುಟೇಶನ್ ಮಾಡುವ ಪೂರ್ವ ದಲ್ಲಿ ನೋಟಿಸ್ ಜಾರಿ ಮಾಡಿದ್ದಾರೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮುಟೇಸನ್ ಮಾಡುವ ಕಾಲಕ್ಕೆ ಯಾವ ಯಾವ

ದಾಖಲಾತಿಗಳನ್ನು ಮತ್ತು ಪ್ರಮಾಣ ಪತ್ರಕ್ಕೆ ಯಾರು ಯಾರು ಸಾಕ್ಷಿದಾರರು ಆಗಿದ್ದರು ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ.,

2. ನಾನು ಮತ್ತು ನನ್ನ ಗಂಡ ಮಾರೆಪ್ಪ 10 ವರ್ಷದಿಂದ ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿದ್ದೇವೆ. ನೀವು ದೇವದುರ್ಗ ದ ಟಿನ್ ಶೆಡ್ ನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಇರುತ್ತೇನೆ ಎನ್ನುತ್ತಾರೆ. ಟಿನ್ ಶೆಡ್ ಜಾಗವು ಮೊದಲು ಖಾಲಿ ಜಾಗವು ಇತ್ತು ಎಂದರೆ ಸರಿ. ಅಲ್ಲಿ ಒಂದು ಹಳೆಯ ಬಿದ್ದಿದ್ದ ಮನೆ ಇತ್ತು ಎಂದರೆ ಸರಿ. ಆ ಹಳೆ ಮನೆ ಮೊದಲು ಅಖ್ತರುನ್ನಿಸಾ ಗಂಡ ಶೇಖ್ ಮಹಿಬೂಬಸಾಬ ಇವರಿಗೆ ಸೇರಿದ್ದು ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಗೊತ್ತಿದೆ ಎನ್ನುತ್ತಾರೆ. ಮನೆ ನಂಬರ್ 2-1-66/3, ಹಳೆ ನಂಬರ್ 2-1-81/3 ಸಿದ್ರಾಮೇಶ್ವರ ಓಣಿ ದೇವದುರ್ಗ ದಲ್ಲಿ 1ನೇ ಪ್ರತಿವಾದಿ ಮನೆ ಇದೆ ಎಂದರೆ ಸರಿ. ವಾದಿಯ ಮನೆಯು 1ನೇ ಪ್ರತಿವಾದಿಯ ಮನೆಯಿಂದ ಎಷ್ಟು ಪೀಟ್ ದೂರದಲ್ಲಿದೆ ಎಂದು ನನಗೆ ಹೇಳಲು ಬರುವುದಿಲ್ಲ. ವಾದಿ ನಸೀಮಾ ಮಸುಲ್ತಾನ ಮತ್ತು ಅವರ ಗಂಡ ಮಕ್ಸೂದ್ ಅಹ್ಮದ್ ಇವರು ನನಗೆ ಪರಿಚಯ ಇರುವುದಿಲ್ಲ. ಟಿನ್ ಶೆಡ್ ನಿಂದ ವಾದಿ ಇವರ ಮನೆ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಕೆಳಗಡೆ ಬರುತ್ತದೆ ಎಂದು ಹೇಳುತ್ತಾರೆ. ವಾದಿಯ ದಾವಾದ ಮನೆಯ ಪೂರ್ವ ದಿಕ್ಕಿಗೆ ಇಸ್ಮಾಯಿಲ್‌ಸಾಬ ರವರ ಮನೆ ಇದೆ ಎಂದರೆ ಸರಿ. ಪಶ್ಚಿಮ ದಿಕ್ಕಿಗೆ ಬಸವರಾಜಪ್ಪ ನ ಮನೆ ಇದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಚರಂಡಿ ಮತ್ತು ದಾರಿ ಇದೆ ಎಂದರೆ ಸರಿ. ದಕ್ಷಿಣ ದಿಕ್ಕಿಗೆ ಬಂದಮ್ಮ ಅವರ ಮನೆ ಇದೆ ಎಂದರೆ ಸರಿ. ದಾವಾದ ಮನೆಯನ್ನು ವಾದಿ ಇವರು ಶ್ರೀಮತಿ ಅಖ್ತರುನ್ನಿಸಾಬ ಬೇಗಂ ಇವರಿಂದ ಖರೀದಿ ಮಾಡಿದ್ದಾರೆಂದರೆ ಸರಿ. ದಾವಾದ ಮನೆಯಲ್ಲಿ ಟಿನ್ ಶೆಡ್ ಹಾಕಿಕೊಂಡು ನಂತರ ನೀವು ಯಾವಗ ಹೇಳುತ್ತೀರೋ ಆಗ ತೆಗೆಯುತ್ತೇನೆ ಎಂದು ಹೇಳಿರುವ ವಿಷಯ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಗೊತ್ತಿದೆ ಎನ್ನುತ್ತಾರೆ. ನಂತರ ವಾದಿ ದಿನಾಂಕ: 01-06-2016 ರಂದು ಪ್ರತಿವಾದಿಯರಿಗೆ ಟಿನ್ ಶೆಡ್ ನ್ನು ತೆಗೆಯಿರಿ ನಾನು ಮನೆಯನ್ನು ಕಟ್ಟಿಸಲು ಪರವಾನಿಗೆ ಪಡೆದುಕೊಂಡು ಕಟ್ಟಿಸುತ್ತೇನೆಂದು ಹೇಳಿರುವ ವಿಷಯ ಗೊತ್ತಿದೆಯಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕ: 08-07-2016 ರಂದು ವಾದಿ ವಕೀಲರ ಮೂಲಕ 1ನೇ ಪ್ರತಿವಾದಿಗೆ ಟಿನ್ ಶೆಡ್ ಜಾಗ ಖಾಲಿ ಮಾಡಿ ಎಂದು ನೋಟಿಸ್ ಕೊಟ್ಟಿರುವ ವಿಷಯ ನನಗೆ ಗೊತ್ತಿಲ್ಲ. ನೋಟಿಸ್ ಮುಟ್ಟಿದ ನಂತರ ಪ್ರತಿವಾದಿಯರು ಮತ್ತು ನಿಮ್ಮ ಗಂಡ ಮಾರೆಪ್ಪ ವಾದಿಯನ್ನು ಇನ್ನು 5-6 ತಿಂಗಳು ಸಮಯವಕಾಶವನ್ನು ಕೊಡಿ ನಾವು ಖಾಲಿ ಮಾಡುತ್ತೇವೆ ಎಂದು ಕೇಳಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ದಿನಾಂಕ: 28-10-2017 ರಂದು ಕಟ್ಟಡ ಪರವಾನಿಗೆಯನ್ನು ವಾದಿ ಪಡೆದುಕೊಂಡಿದ್ದರು

ಮತ್ತು ಪ್ರತಿವಾದಿಯರು ಟಿನ್ ಶೆಡ್ ನ್ನು ಖಾಲಿ ಮಾಡದೇ ಇರುವುದರಿಂದ ವಾದಿ ಈ ದಾವೆ ಸಲ್ಲಿಸಿರುವ ವಿಷಯ ನನಗೆ ಗೊತ್ತಿಲ್ಲ. ದಿನಾಂಕ: 01-11-2017 ರಂದು ವಾದಿ ಪ್ರತಿವಾದಿಯರಿಗೆ ಜಾಗವನ್ನು ಖಾಲಿ ಮಾಡಿರಿ ಎಂದು ಕೇಳಿಕೊಂಡಿರುವ ವಿಷಯ ನನಗೆ ಗೊತ್ತಿಲ್ಲ. ನಿಮ್ಮ ಗಂಡ ಮತ್ತು ನಿಮ್ಮ ಅತ್ತೆ ಮಾವ ಇವರ ಹೆಸರಿಗೆ ಕಾನೂನುಬದ್ದವಾಗಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ